ದೇವರ ಮನಸಿಗೆ ಬರವಲ್ದು' ಮುದುಕ ಕೈ ಮೇಲೆತ್ತಿ ಉಸಿರುಬಿಟ್ಟ.

ನಿಜವಾಗಿಯೂ ಅವರ ಮಾತು ಮನಸ್ಸಿಗೆ ನಾಟಿದವು. ಸರಕಾರೀ ನೌಕರಶಾಹಿಯ ಹೃದಯ ಹೀನತೆಯನ್ನು ನೆನೆದು ಕಸಿವಿಸಿಯೂ ಆಯಿತು. ಆದರೆ ಈ ಎಲ್ಲ ಭಾವನೆಗಳನ್ನೂ ಮೆಚ್ಚಿ ಇನ್ನೊಂದು ಸಂಶಯ ಬಲವಾಗತೊಡಗಿತ್ತು. ಇನ್ನೇನು ದೇಶಾವರಿ ತನ್ನ ಗುರಿ ಮುಟ್ಟಿಯೇ ಬಿಟ್ಟಿತು ಎನಿಸಿ, ಅದರ ಕೊನೆಯ ಕ್ಷಣಕ್ಕಾಗಿ ಕಾಯುತ್ತ ಕೂತೆ. ಯಾವ ಕ್ಷಣದಲ್ಲಾದರೂ ಈ ಮುದುಕ ನನ್ನಿಂದ ಸಹಾಯ ಕೇಳಬಹುದು; ಹಣಕ್ಕೆ ಬಾಯಿ ಹಾಕಬಹುದು—ಎಂಬ ನಿರೀಕ್ಷೆಯಿಂದ ನನ್ನ ಜಿಪುಣತನ ಜಾಗೃತವಾಯಿತು. ಎದುರಿಸುವ ರಕ್ಷಣೋಪಾಯಗಳನ್ನು, ಪಾರಾಗುವ ದಾರಿಗಳನ್ನು ಕುರಿತು ಯೋಚಿಸತೊಡಗಿದೆ. ಇಂಥ ದೇಶಾವರಿಯ ಅಗ್ಗದ ತಂತ್ರಗಳಿಗೆ ಗೊತ್ತಿದ್ದೂ ಇದ್ದೂ ಬಲಿಬೀಳುವ ನನ್ನ ದಾಕ್ಷಿಣ್ಯದ ಸ್ವಭಾವದ ಬಗ್ಗೆ ಚಿಂತೆಯಾಯಿತು.

ಮುದುಕ ಮುಂದುವರಿಸಿದ: 'ಈಗಿನ ಕಾಲದ ಮಕ್ಕಳು ಅಂದರ, ತಂದಿ—ತಾಯಿ ಸತ್ತರೂ ಹೊಳ್ಳಿ ನೋಡ್ಯಾರೂ ಅನ್ನೂ ಬರಾಸ ಇಲ್ಲ ನೋಡ್ರಿ ಸಾಹೇಬರ. ನೀವು ಬರದೀರೆಲ್ಲ ಆ ಕಥಿ ...ತಂದಿ ಸತ್ತಾಗ ಮಗ ಮಣ್ಣಿಗೆಂತ ಕಷ್ಟಪಟ್ಟು ಬರತಾನ, ಅಷ್ಟರೊಳಗs ಮಣ್ಣು ಮುಗಿದಿರತೈತಿ.... ಏನ್ರಿ ಅದರ ಹೆಸರು?'

ಓ! ಮುದುಕನ ಮಾತಿನ ದೇಶಾವರಿಯಲ್ಲಿ ಬರಿಯ ಸುಳ್ಳೇ ಇರಲಿಲ್ಲ. ಹಾಗಾದರೆ! ಆ ಕಥೆಯನ್ನು ಈ ಮುದುಕ ಈ ವಯಸ್ಸಿನಲ್ಲಿ ನಿಜವಾಗಿಯೂ ಓದಿರಬಹುದೆ?... ಅಥವಾ ದೇಶಪಾಂಡೆ ಈತನಿಗೆ ಆ ಕಥೆಯ ಬಗ್ಗೆ ಹೇಳಿರಬಹುದೆ? ಏನೇ ಇದ್ದರೂ ಆ ಮಾತಿನಿಂದ ನನ್ನ ಮನಸ್ಸು ಸ್ವಲ್ಪ ಮೆತ್ತಗಾಯಿತು. ಆದರೂ ಅವನ ದೇಶಾವರಿ ನನ್ನ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳಲು ಬಿಡಬಾರದು ಎನಿಸಿತು.

ಮುದುಕ ಈ ಕಥೆಯ ಹೆಸರು ನೆನಪು ಮಾಡಿಕೊಳ್ಳಲು ಬಹಳ ಕಷ್ಟಪಟ್ಟ. ನನಗೆ ಅದರ ಹೆಸರು ನಾಲಿಗೆಯ ತುದಿಯ ಮೇಲೇ ಇತ್ತು. ಆದರೆ ಹೇಳಲಿಲ್ಲ. ಇದೂ ಕೂಡ ದೇಶಾವರಿಯ ಒಂದು ಪರಿಚಿತ ತಂತ್ರವೇ ಆಗಿರಬಹುದಲ್ಲವೆ? ಏನೋ ಒಂದು ಅಸ್ಪಷ್ಟ ಸೂಚನೆಯನ್ನು ಬಿಟ್ಟು ನೋಡುವನು. ಬಲಿಪಶು ಅದನ್ನು ಅಮಾಯಕವಾಗಿ ನಂಬಿ ಅದಕ್ಕೊಂದು ಸ್ಪಷ್ಟ ಆಕಾರ ಕೊಡುವುದು, ನಂತರ ದೇಶಾವರಿ ಇನ್ನಷ್ಟು ಆತ್ಮವಿಶ್ವಾಸದಿಂದ ಅದನ್ನು ವಿಸ್ತರಿಸುವುದು... ನಾನಾಗಿ ಈ ತಂತ್ರದಲ್ಲಿ ಭಾಗವಹಿಸಿ ಆ ಮುದುಕನಿಗೆ ಸಹಾಯ ಮಾಡಲು, ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳಲು ಮನಸ್ಸಾಗಲಿಲ್ಲ. ಅವನು ಕಥೆಯ ಹೆಸರನ್ನು ನೆನಪಿಸಿಕೊಳ್ಳಲು ನಡೆಸಿದ್ದ ಒದ್ದಾಟವನ್ನು ನೋಡುತ್ತ, ಮನಸ್ಸಿನಲ್ಲಿಯೇ ಮುಸಿಮುಸಿ ನಗುತ್ತ ಕುಳಿತುಕೊಂಡೆ.

ಕೊನೆಗೆ, ಇದನ್ನೆಲ್ಲಾ ನೋಡುತ್ತ ಕುಳಿತಿದ್ದ ನನ್ನ ಮಗಳು ಕಥೆಯ ಹೆಸರು ನೆನಪು ಮಾಡಿಕೊಟ್ಟಳು.

ಮುದುಕನಿಗೆ ಬಹಳ ಸಂತೋಷವಾಯಿತು. 'ಹಾಂ ಅದs ನೋಡ್ರಿ... ಏ, ನಿಮ್ಮ ಮಗಳು ಬಾಳಾ ಶಾಣ್ಯಾಕಿ ಅದಾಳ್ರಿ. ತಂದೀ ಹಂಗs ಪ್ರತಿಭಾವಂತ ಮಗಳು. ಈಕೀನೂ ಬರೀತಾಳೇನ್ರಿ?'

ಹತ್ತು—ಹನ್ನೆರಡು ವರ್ಷದ ಹುಡುಗಿ ಏನು ಬರೆದಾಳು? ಇದೂ ಒಂದು ಮುದುಕನ ದೇಶಾವರೀ ಚಾಲು ಎಂದುಕೊಂಡು 'ಇಲ್ಲ; ಬರೇ ಓದ್ತಾಳೆ, ಅಷ್ಟs' ಎಂದೆ.

ಮುದುಕ ಅವಳ ಹೆಸರು ಕೇಳಿದ. ಗಲ್ಲ ಹಿಡಿದು, 'ದೊಡ್ಡಾಕಿ ಆದ ಮ್ಯಾಲ ನೀನೂ ನಿಮ್ಮಪ್ಪಾರಂಗ ಒಳ್ಳೊಳ್ಳೇ ಪುಸ್ತಕಾ ಬರದು ದೊಡ್ಡ ಸಾಹಿತಿ ಆಗಬೇಕು ನೋಡವಾ' ಎಂದ.

'ಆ ಕಥೀ ನೋಡ್ರಿ ಸಾಹೇಬರ, ಅಗದೀ ನನ್ನ ಅನುಭವನs ಇದ್ದಂಗೈತಿ. ನಮ್ಮ ತಂದೀ—ತಾಯಿ